ಈ ಆಸ್ಪತ್ರೆಯ ಬಗ್ಗೆ ಸರ್ಕಾರಕ್ಕೆ ಆಗ್ಗಿಂದಾಗ್ಗೆ ಹಲವಾರು ದೂರುಗಳು ಬಂದಿರುತ್ತವೆ. ದಿನಾಂಕ 21-8-92 ರ ಅಂದಾಜು ಸಮಿತಿಯ ವರದಿಯಲ್ಲಿಯೂ ಸಹ ಈ ಆಸ್ಪತ್ರೆಯ ದುರಾಡಳಿತ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತದೆ. ಇತ್ತೀಚೆಗೆ ಈ ಸಂಸ್ಥೆಯ ಕೆಲವು ಸಿಬ್ಬಂದಿ ವರ್ಗದವರು ಸರ್ಕಾರಕ್ಕೆ ಸಂಸ್ಥೆಯ ಬಗ್ಗೆ ದೂರು ಸಲ್ಲಿಸಿರುತ್ತಾರೆ.

ಸಂಜಯಗಾಂಧಿ ಆಪಘಾತ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರು, ಅಂದಾಜು ಸಮಿತಿಯ ವರದಿಯಲ್ಲಿನ ಆಕ್ಷೇಪಣೆಗಳ ಬಗ್ಗೆ ವಿವರವಾದ ಉತ್ತರಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರವು ಈ ಉತ್ತರಗಳನ್ನು ಪರಿಶೀಲಿಸಲಾಗುತ್ತಿದೆ. ಆಸ್ಪತ್ರೆಯ ಸಿಬ್ಬಂದಿ ವರ್ಗದ ವರು ನೀಡಿರುವ ದೂರಿನ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಹಿಂದಿನ ಬೆಂಗಳೂರು ವಿಭಾಗಾಧಿಕಾರಿಗಳಿಗೆ ತಿಳಿಸಲಾಗಿತ್ತು. ಅದರಂತೆ ವಿಚಾರಣೆ ನಡೆಸಿ, ವಿಭಾಗಾಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆ. ಈ ವರದಿಯನ್ನು ಸರ್ಕಾರವು ತೀವ್ರಗತಿಯಲ್ಲಿ ಪರಿಶೀಲಿಸುತ್ತಿದೆ.

ಈ ಸಂಸ್ಥೆಯ ಕಾರ್ಯವೈಖರಿಯನ್ನು ಸುವ್ಯವಸ್ಥೆಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳ ಲಾಗುತ್ತಿದೆ. ಹಾಗೂ ಈ ಆಸ್ಪತ್ರೆಯ ಆವ್ಯವಸ್ಥೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಾಗ, ಸರ್ಕಾರವು ಕಟ್ಟುನಿಟ್ಟಾದ ಕ್ರಮವನ್ನು ಕೈಗೊಳ್ಳುವುದೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

1984 ರಲ್ಲಿ ಪ್ರಾರಂಭಗೊಂಡ ಈ ಆಸ್ಪತ್ರೆಯ ಮುಖ್ಯ ಕಟ್ಟಡದ ನಿರ್ಮಾಣ ಕಾರ್ಯವು ಇನ್ನೂ ಪೂರ್ಣಗೊಂಡಿಲ್ಲದಿರುವ ಬಗ್ಗೆ ದೂರುಗಳು ಇವೆ. ಹಾಗೂ 1987 ರಲ್ಲಿ ಉದ್ಘಾಟಿಸಲಾದ ಪಿಜಿಯೋಥೆರಪಿ ವಿಭಾಗವು ಕಾರ್ಯನಿರ್ವಿಹಿಸುತ್ತಿಲ್ಲದಿರುವುದು ಈ ಬಗ್ಗೆ ಸರ್ಕಾರವು ಎರಡೂ ಕಟ್ಟಡಗಳು ಪೂರ್ಣಗೊಳ್ಳಲು ಹಾಗೂ ಕಾರ್ಯಾಚರಣೆಗೊಳ್ಳಲು ಶೀಘ್ರವಾಗಿ ಕ್ರಮ ಕೈಗೊಳ್ಳ ಲಾಗುವುದು.

ಶಾಸನ ರಚನೆ ಕಾರ್ಯಕಲಾಪಗಳು

(ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು)

(1) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ, 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೇ, 1995 ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಮಂತ್ರಿಗಳು) :- ಮಾನ್ಯ ಉಪ ಸಭಾಪತಿಗಳೇ, ಭಾರತದ ಸರ್ವೋಚ್ಚ ನ್ಯಾಯಾಲಯದ ಮಂಡಲ ಆಯೋಗದ ವರದಿಯ ಮೇರೆಗೆ 1992 ರ ತೀರ್ಪಿನ ಮೇರೆಗೆ ಪ್ರತಿಯೊಂದು ರಾಜ್ಯದಲ್ಲಿ ಒಂದು ಶಾಶ್ವತವಾದ ಆಯೋಗವನ್ನು ರಚನೆ ಮಾಡಬೇಕು ಎನ್ನತಕ್ಕಂಥ ಒಂದು ಹಿನ್ನೆಲೆಯಲ್ಲಿ ಈ ಶಾಸನವನ್ನು ನಾನು ತೆಗೆದುಕೊಂಡು ಬಂದಿದ್ದೇನೆ. ಇದಕ್ಕೆ ಹಿಂದುಳಿದ ವರ್ಗದ ಜನಾಂಗದ

ಅಭ್ಯುದಯದ ಬಗ್ಗೆ ಅಥವಾ ಇಲಾಖೆಯು ನಡೆಸತಕ್ಕಂಥ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಈ ಶಾಶ್ವತ ಆಯೋಗದ ಇನ್ನೊಂದು ಉದ್ದೇಶ ಅಂದರೆ ಸಮಾಜದಲ್ಲಿ ಯಾವ ಯಾವ ಅತ್ಯಂತ ಹಿಂದುಳಿದ ವರ್ಗಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಬೇಕು ಅಥವಾ ಬೇಡವೇ ಎನ್ನುವಂಥ ಒಂದು ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಇದಕ್ಕೆ ಒಬ್ಬ ಅಧ್ಯಕ್ಷರಿಗೆ 3 ವರ್ಷ ಅವಧಿಯನ್ನು ಫಿಕ್ಸ್ ಮಾಡಿ ಈ ಶಾಸನವನ್ನು ಇಲ್ಲಿ ತರಲಾಗಿದೆ. ಅದಕ್ಕಾಗಿ ಈ ಮೇಲೆ ತಿಳಿಸಿದ ಅಂಶಗಳ ಹಿನ್ನಲೆಯಲ್ಲಿ ಈ ಆಯೋಗದ ವಿಧೇಯಕವನ್ನು ಪರ್ಯಾಲೋಚನೆಗಾಗಿ ಅಂಗೀಕರಿಸಬೇಕೆಂದು ಕೋರುತ್ತೇನೆ.

+ **ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ** (ಬಾಗೇಪಲ್ಲಿ) :- ಮಾನ್ಯ ಉಪಾಧ್ಯಕ್ಷರೇ, ಹಿಂದುಳಿದ ವರ್ಗಗಳ ಆಯೋಗದ ರಚನೆಯಲ್ಲಿ ಎರಡು ಮುಖ್ಯವಾದಂಥ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಒಂದನೆಯದು, ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೋಸ್ಕರ ಹಿಂದೆ ಕೂಡ ಸರ್ಕಾರ ಹಲವಾರು ಆಯೋಗಗಳನ್ನು ರಚನೆ ಮಾಡತಕ್ಕಂಥ ಆಯೋಗವನ್ನು ಹೆಚ್ಚಿನ ಸಂಬಂಧದಲ್ಲಿ ರಾಜಕೀಯ ಲಾಭಕೋಸ್ಕರ ಉಪಯೋಗಿಸಿಕೊಂಡ ಪರಿಸ್ಥಿತಿಯನ್ನು ಈ ರಾಜ್ಯದಲ್ಲಿ ಮತ್ತು ದೇಶದಲ್ಲಿ ನೋಡುತ್ತಾ ಇದ್ದೇವೆ. ಆದರೆ ನಮಗೆ, ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಆಗಬೇಕು ಎನ್ನುವುದರಲ್ಲಿ ಯಾವುದೇ ಭಿನ್ನಾಭಿಪ್ರಾಯವೂ ಇಲ್ಲ. ಆವರಿಗೆ ಅಭಿವೃದ್ಧಿಯಾಗತಕ್ಕಂಥ ರೀತಿಯಲ್ಲಿ ಮುಂದುವರಿಯುವುದಕ್ಕೆ ಪ್ರೋತ್ಸಾಹ ಕೊಡಬೇಕು. ಆದರೆ ಇದರ ಹೆಸರಿನಲ್ಲಿ ರಾಜಕೀಯ ಲಾಭವನ್ನು ಪಡೆದುಕೊಳ್ಳುವುದನ್ನು ತಡೆಯಬೇಕು ಎನ್ನುವಂಥದ್ದು ಬಹಳ ಮುಖ್ಯವಾದ ಒಂದು ಅಂಶ. ಹಾಗೆ ತಡೆಯಬೇಕೆಂದು ಹೇಳಿದರೆ ಒಂದು, ಈ ಆಯೋಗವನ್ನು ಶಾಶ್ವತವಾದ ಆಯೋಗವನ್ನಾಗಿ ರಚನೆ ಮಾಡಬೇಕು. ಆಗಾಗ್ಗೆ ಸಂದರ್ಭಕ್ಕೆ ಅನುಸಾರವಾಗಿ ಒಂದೊಂದು ಸರ್ಕಾರ ಬಂದಾಗ ಒಂದೊಂದು ಆಯೋಗವನ್ನು ರಚನೆ ಮಾಡಿಬಿಟ್ಟು, ಆ ಸರ್ಕಾರದ ಅವಧಿಯಲ್ಲಿ ರಚನೆಯಾದಂಥ ಹಿಂದುಳಿದ ವರ್ಗದ ಆಯೋಗ ಕೊಟ್ಟಂಥ ವರದಿಯನ್ನು ಇನ್ನೊಂದು ಸರ್ಕಾರ ಅದನ್ನು ತಿರಸ್ಕಾರ ಮಾಡುವುದು, ಇಲ್ಲದಿದ್ದರೆ ಅದರಲ್ಲಿ ಅರ್ಧಂಶವನ್ನು ಒಪ್ಪತಕ್ಕಂಥದ್ದು, ಕಾಲು ಅಂಶವನ್ನು ಒಪ್ಪತಕ್ಕಂಥದ್ದು, ತದನಂತರ ಇಡೀ ಕರ್ನಾಟಕ ರಾಜ್ಯದೊಳಗೆ ಅಥವಾ ದೇಶದೊಳಗೆ ಒಂದು ದೊಡ್ಡ ರಂಪರಾದ್ಧಾಂತ, ಹೋರಾಟಗಳು ಆಗತಕ್ಕಂಥದು, ಆ ಹೋರಾಟಕ್ಕೆ ಮಣಿದುಬಿಟ್ಟು ಇನ್ನೊಂದು ಸರ್ಕಾರ ವರದಿಯನ್ನು ವಾಪಸ್ಸು ತೆಗೆದುಕೊಳ್ಳುವುದು. ಈ ರೀತಿಯ ಪುನರಾವರ್ತನೆ ಆಗುತ್ತಾ ಇರತಕ್ಕಂಥದನ್ನು ನಾವು ನೋಡುತ್ತಾ ಇದ್ದೇವೆ. ಇವತ್ತಿನ ಬದಲಾದಂಥ ಸಾಮಾಜಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ, ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ, ಯಾರ್ಯಾರೋ ಹಿಂದುಳಿದ ವರ್ಗಗಳ ಗುಂಪಿಗೆ ಈ ದೇಶದಲ್ಲಿ ಸೇರಲೂ ಬಹುದು. ಹೇಳು ವುದಕ್ಕಾಗುವುದಿಲ್ಲ.

ವಿದೇಶಿ ಬಂಡವಾಳ, ಆ ಬಂಡವಾಳ, ಈ ಬಂಡವಾಳ, ಎಲ್ಲಾ ಹರಿದು ಬಂದು ಈ ದೇಶಕ್ಕೆ ಯಾರ್ಯಾರು ಹಿಂದುಳಿದವರ್ಗದವರು ಆಗಿಬಿಡುತ್ತಾರೋ, ಮುಂದುವರಿದವರು ಯಾರು ಆಗುತ್ತಾರೋ ಎಂದು ಹೇಳುವುದಕ್ಕಾಗುವುದಿಲ್ಲ; ಅಂತಹ ಒಂದು ಪರಿಸ್ಥಿತಿ ಇದೆ. ಅದಕ್ಕೋಸ್ಕರ ನನ್ನ ಅಭಿಪ್ರಾಯ ಸರ್ಕಾರದ ಮೇಲೆ ತಮ್ಮ ಮುಖಾಂತರ ಆ ಆಯೋಗವನ್ನು ಶಾಶ್ವತ ಆಯೋಗವನ್ನು ರಚನೆ ಮಾಡುವುದಕ್ಕೆ ಸರ್ಕಾರ ತಿದ್ದುಪಡಿಯನ್ನು, ಕಾನೂನನ್ನು ತರಬೇಕು. ತಾತ್ಕಾಲಿಕವಾದಂತಹ ಆಯೋಗಗಳನ್ನು ತಂದು.....

ಶ್ರೀ ಸಿದ್ಧರಾಮಯ್ಯ :- ಶಾಶ್ವತ ಆಯೋಗವೇ ಇದು.

ಶ್ರೀ ಜೆ. ಎ. ಶ್ರೀ ರಾಮರೆಡ್ಡಿ :- ಅಧ್ಯಕ್ಷರನ್ನು ಮೂರು ವರ್ಷ ಎಂದು ಮಾಡುತ್ತಿದ್ದೀರಿ. ಆದ್ದರಿಂದ ನೇಮಕ ಮಾಡತಕ್ಕಂತಹ ಸಂದರ್ಭದಲ್ಲಿ, ಈ ಒಂದು ಸ್ಯ್ಯಾಚ್ಯುಟರಿ ರೀತಿಯಲ್ಲಿ ಇರಬೇಕು. 3 ವರ್ಷ ಇರುತ್ತೀರಿ ನೀವು.

ಶ್ರೀ ರಮೇಶ್ ಸಿ. ಜಿಗಜಿಣಗಿ :- ಆಯೋಗ ಶಾಶ್ವತ. ಅಧ್ಯಕ್ಷರು 3 ವರ್ಷದ ಅವಧಿಯವರೆಗೆ ಇರುತ್ತಾರೆ.

ಶ್ರೀ ಜೆ. ಎ. ಶ್ರೀ ರಾಮರೆಡ್ಡಿ :- ಹೌದು ಆಯೋಗ ಶಾಶ್ವತ. ಅಧ್ಯಕ್ಷಕರ ಅವಧಿ 3 ವರ್ಷ. ಈಗ ನೀವು ಅಧ್ಯಕ್ಷಕರನ್ನು ನೇಮಕ ಮಾಡುತ್ತೀರಿ 3 ವರ್ಷದ ಅವಧಿಗೆ, ಅವರೊಂದು ವರದಿಯನ್ನು ಸಲ್ಲಿಸುತ್ತಾರೆ, ನಿಮ್ಮ ಸರ್ಕಾರ ಮುಂದೆ ಇರುತ್ತದೆಂದು ಗ್ಯಾರೆಂಟಿ ಏನೂ ಇಲ್ಲ. ಇನ್ನೊಂದು ಸರ್ಕಾರ ಬರುತ್ತದೆ.

ಶ್ರೀ ಸಿದ್ಧರಾಮಯ್ಯ :- ಮಂಡಲ್ ಕಮೀಷನ್ ವರದಿ ಮೇಲೆ ಸರ್ವೋಚ್ಚ ನ್ಯಾಯಾಲಯ ಕೊಟ್ಟಿರತಕ್ಕ ತೀರ್ಪಿನ ಅಡಿಯಲ್ಲಿ ಶಾಶ್ವತ ಆಯೋಗವನ್ನು ಪ್ರತಿ ರಾಜ್ಯಗಳೂ ಕೂಡ ರಚನೆ ಮಾಡಬೇಕೆಂಬ ಆದೇಶವನ್ನು ಅವರು ಕೊಟ್ಟಿದ್ದಾರೆ. ಅದಕ್ಕನುಗುಣವಾಗಿ ಇದನ್ನು ಮಾಡುತ್ತಾ ಇರತಕ್ಕಂತಹದ್ದು. ಇದು ಶಾಶ್ವತವಾಗಿರತಕ್ಕಂತಹದ್ದು. ಇದಕ್ಕೆ ಕೊಟ್ಟಿರತಕ್ಕಂತಹ ಕಾರ್ಯ ವ್ಯಾಪ್ತಿ ಕಾಲಾನುಕಾಲಕ್ಕೆ, ಯಾರು ಬ್ಯಾಕ್‌ವರ್ಡ್ ಕ್ಲಾಸ್‌ನ ವ್ಯಾಪ್ತಿಯಲ್ಲಿ ಬರುತ್ತಾರೆ, ಅವರನ್ನು ಸೇರಿಸತಕ್ಕಂತಹದ್ದು ಅಥವಾ ಡಿಲೀಟ್ ಮಾಡತಕ್ಕಂತಹದ್ದು, ಇದನ್ನು ಮಾಡತಕ್ಕಂತಹ ಕೆಲಸ ಈ ಆಯೋಗದ್ದು. ಆದ್ದರಿಂದ ಸರ್ಕಾರ ಯಾವುದು ಇರುತ್ತದೆ, ಯಾವುದು ಹೋಗುತ್ತದೆ ಅನ್ನತಕ್ಕಂತಹದಲ್ಲ. ಆ ಆಯೋಗದ ವರದಿಯನ್ನು ಯಾವುದೇ ಸರ್ಕಾರಗಳು ಬದಲಾವಣೆ ಯಾದರೂ ಸಹ ಅದನ್ನು ಪರಿಗಣಿಸಬೇಕಾಗುತ್ತದೆ. ಯಾರು ಬ್ಯಾಕ್‌ವರ್ಡ್ ಕ್ಲಾಸ್‌ನ ಚೌಕಟ್ಟಿನಲ್ಲಿ ಬರುತ್ತಾರೆ, ಅವರು ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಬರುತ್ತಾರೆ. ಯಾರು ಬ್ಯಾಕ್‌ವರ್ಡ್ ಕ್ಲಾಸ್ ಅಲ್ಲಿ ಅಂತಹವನ್ನು ತೆಗೆದುಹಾಕುವ ಅಧಿಕಾರ ಕೂಡ ಅವರಿಗೆ ಇರುತ್ತದೆ. ಆಗಿಂದಾಗ್ಗೆ, ಜನರು ಹೇಳುತ್ತಲೇ ಇರುತ್ತಾರೆ. ಹಿಂದುಳಿದ ಜಾತಿಯ ಪಟ್ಟಿಗೆ ನಾವು ಸೇರಿಕೊಳ್ಳಬೇಕು ಎಂದು, ಕೆಲವರು ಹಿಂದುಳಿದ ಜಾತಿಯ ಪಟ್ಟಿಯಲ್ಲಿರುವವರು, ಹಿಂದುಳಿದ ಜಾತಿಯವರಲ್ಲ, ಅನ್ನತಕ್ಕಂತಹವೂ ಇರುತ್ತವೆ. ಈ ಕಾರಣಕ್ಕೋಸ್ಕರ, ರಾಜಕೀಯ ನಿರ್ಣಯಗಳು ಆಗಬಾರದು ಅನ್ನುವುದಕ್ಕೋಸ್ಕರ ಒಂದು ಪರ್ಮನೆಂಟ್ ಕಮೀಷನ್ ಇಟ್ಟು, ಇದಕ್ಕೊಂದು ವೈಜ್ಞಾನಿಕವಾದ ರೂಪ ಇರಬೇಕು ಅನ್ನುವ ಕಾರಣಕ್ಕೋಸ್ಕರವಾಗಿ, ಈ ಆಯೋಗವನ್ನು ರಚನೆ ಮಾಡಿರತಕ್ಕಂತಹದ್ದು. ಆದ್ದರಿಂದ ಸರ್ಕಾರಗಳು ಬದಲಾವಣೆಯಾದ ತಕ್ಷಣ ವರದಿಗಳು ಏನೂ ಆಗುವುದಿಲ್ಲ.

ಶ್ರೀ ಜೆ. ಎ. ಶ್ರೀ ರಾಮರೆಡ್ಡಿ :- ನಮ್ಮ ಹಿಂದಿನ ಅನುಭವವನ್ನು ನಾನು ಹೇಳುತ್ತಿದ್ದೇನೆ. ಹಿಂದಿನ ಅನುಭವ ಏನಾಗಿದೆ ಎಂಬುದನ್ನು ನಾವು ನೋಡಿದ್ದೇವೆ; ಆ ರೀತಿ ಆಗಲಿಕ್ಕೆ ಅವಕಾಶ ಕೊಡಬಾರದು. ಇದರಲ್ಲಿ ಇನ್ನೊಂದು ಅಂಶವನ್ನು ಸೇರಿಸಬಹುದಲ್ಲಾ ಹಾಗಾದರೆ, ಸರ್ಕಾರಕ್ಕೆ ಈ ಹಿಂದುಳಿದ ಆಯೋಗ ಕೊಟ್ಟಂತಹ ವರದಿ ಯಾವುದೇ ಸರ್ಕಾರವಾಗಲೀ, ಜಾರಿ ಮಾಡಲೇಬೇಕು ಯಾವುದೇ ಒಂದು ಸರ್ಕಾರದಲ್ಲಿ ಯಾರೋ ಒಬ್ಬರನ್ನು ನೇಮಕ ಮಾಡಿರುತ್ತಾರೆ; ಆಯೋಗದ ಅಧ್ಯಕ್ಷರನ್ನಾಗಿ ಅವರು ಕೊಟ್ಟಂತಹ ವರದಿ ಮುಂದೆ

ಬರತಕ್ಕಂತಹ ಸರ್ಕಾರಗಳು, ಕೂಡ ಮ್ಯಾಂಡೇಟರಿಯಾಗಿ ಅದನ್ನು ತಿರಸ್ಕಾರ ಮಾಡದ ಹಾಗೆ ಅದನ್ನು ಜಾರಿಗೆ ತರಬೇಕು ಅಂತ ಇದರಲ್ಲಿ ಸೇರಿಸಬಹುದಲ್ಲಾ.

ಶ್ರೀ ಸಿದ್ದರಾಮಯ್ಯ :- ಇಲ್ಲಿ ಗೊಂದಲ ಆಗಬೇಕಾದಂತಹ ಅಗತ್ಯ ಇಲ್ಲ. ಹಿಂದೆ ಆಯೋಗಗಳನ್ನು ರಚನೆ ಮಾಡಿ, ಯಾರು ಹಿಂದುಳಿದವರು ಎನ್ನತಕ್ಕಂತಹದ್ದನ್ನು ಗುರುತಿಸಿ ವರದಿ ಕೊಡತಕ್ಕಂಹದ್ದು ಒಂದು ಭಾಗ. ಅದನ್ನು ಸರ್ಕಾರ ತೀರ್ಮಾನ ತೆಗೆದಕೊಳ್ಳತಕ್ಕಂತ ಹದ್ದು, ಅಥವಾ ಬಿಡತಕ್ಕಂತಹದ್ದು ಸರ್ಕಾರಕ್ಕೆ ಬಿಟ್ಟಂತಹ ವಿಚಾರ. ಆದರೆ ಇದು ಸುಪ್ರೀಂ ಕೋರ್ಟಿನವರು ಈ ಒಂದು ಶಾಶ್ವತ ಆಯೋಗವನ್ನು ಪ್ರತಿ ರಾಜ್ಯಗಳಲ್ಲೂ ಸ್ಥಾಪನೆ ಮಾಡ ಬೇಕು, ಈ ಆಯೋಗ ಶಾಶ್ವತವಾಗಿರತಕ್ಕಂತಹದ್ದು,. ಇದರ ಕಾರ್ಯವ್ಯಾಪ್ತಿ, ಯಾರು ಹಿಂದುಳಿದ ಜಾರಿಗೆ ಸೇರಿಲ್ಲ, ಕಾರಣಾಂತರಗಳಿಂದ, ಅಥವಾ ಹಿಂದುಳಿದ ಜಾತಿ ಅಲ್ಲದೆ ಇರುವವರು ಯಾರು ಸೇರಿ ಕೊಂಡಿದ್ದಾರೆ, ಈ ಮಾಪನಗಳನ್ನು ಗುರುತಿಸಿ ಅದನ್ನು ಆಗಿಂದಾಗ್ಗೆ, ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಕೊಡತಕ್ಕಂತಹದ್ದು. ಮತ್ತೆ ಸರ್ಕಾರಗಳು ಈ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಹಿಂದೆ ನೇಮಕವಾಗತಕ್ಕಂತಹ ಆಯೋಗಗಳು ಈಗ ರಚನೆಯಾಗುತ್ತಿರುವ ಆಯೋಗಕ್ಕೂ ಬಹಳ ವ್ಯತ್ಯಾಸಗಳು ಇವೆ. ಆದ್ದರಿಂದ ಮಾನ್ಯ ಸದಸ್ಯರು ಗೊಂದಲ ಮಾಡಿಕೊಳ್ಳಬೇಕಾದ ಅಗತ್ಯ ಇಲ್ಲ.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ :- ನಾನು ಗೊಂದಲ ಮಾಡಿಕೊಳ್ಳಲಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ರೀತಿ ಅದನ್ನು ಮಾಡಿ ಎಂದು ಹೇಳುತ್ತಿದ್ದೇನೆ. ಗೊಂದಲ ಏನೂ ಇಲ್ಲ ನನಗೆ. ಅದಕ್ಕೆ ಆಯೋಗ ಮತ್ತು ಸದಸ್ಯರೆಲ್ಲಾ ಪರ್ಮನೆಂಟಾಗಿ ಇರುತ್ತಾರೆ. ಅವರು ಕೊಟ್ಟಂತಹ ಸಲಹೆ ಮತ್ತು ಸೂಚನೆಗಳು ಏನಾಗುತ್ತದೆ? ಹಲವಾರು ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಅದನ್ನು ಸರ್ಕಾರ ಉಪಯೋಗಿಸಕೊಳ್ಳುವುದಕ್ಕೆ ಅವಕಾಶ ಇರುವ ರೀತಿಯಲ್ಲಿ ಅದನ್ನು ತರಬೇಕು ಎಂಬ ಪ್ರಶ್ನೆ ಇಲ್ಲಿ ಇರತಕ್ಕಂತಹದ್ದು. ಮತ್ತು ಹಿಂದುಳಿದವರ್ಗ ಗಳನ್ನು ಗುರುತಿಸತಕ್ಕ ಸಂದರ್ಭದಲ್ಲೂ ಕೂಡ ಒಂದು ವೈಜ್ಞಾನಿಕವಾಗಿ ಪರಿಶೀಲನೆ ಅವಶ್ಯಕತೆ ಇದೆ. ಅದು ಇಲ್ಲದೆ ಹೋದರೆ, ನಾಳೆ ಯಾರಾದರೂ ಒಂದು ಅರ್ಜಿಯನ್ನು ಹಿಡಿದುಕೊಂಡು ಬಂದು, ನಮ್ಮನ್ನು ಇದಕ್ಕೆ ಸೇರಿಸಿ ಬಿಡಿ, ನಮ್ಮನ್ನು ಇದಕ್ಕೆ ಸೇರಿಸಿ ಬಿಡಿ, ಅನ್ನತಕ್ಕಂತಹ ಪ್ರಶ್ನೆ ಬಾರದ ಹಾಗೆ ಒಂದು ಎಚ್ಚರಿಕೆಯನ್ನು ವಹಿಸಬೇಕೆಂಬ ಪ್ರಶ್ನೆ ಇಲ್ಲಿ ಇರತಕ್ಕಂತಹದ್ದು.

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ (ಬೀದರ್) :- ಮಾನ್ಯ ಉಪಾಧ್ಯಕ್ಷರೆ, ಈ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಬಯಸುವುದೇನೆಂದರೆ, ಬ್ಯಾಕ್‌ವರ್ಡ್ ಶಾಶ್ವತ ಆಯೋಗ ವನ್ನು ರಚನೆ ಮಾಡುವಂತಹ ತಿದ್ದುಪಡಿಯನ್ನು ಏನು ತಾವು ತಂದಿದ್ದೀರಿ, ಇದರಲ್ಲಿ ಮೈನಾರಿಟೀಸ್ ಇದ್ದಾರೆ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ :- ಈ ತಿದ್ದುಪಡಿಯ ಮೇಲುಗಡೆಯೇ ಅದು ಇದೆ. ಇಲಾಖೆಯ ಮೈನಾರಿಟಿ, ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸಂಬಂಧಪಟ್ಟದ್ದು ಎಂದು ಇದೆ. ಬಹುಶಃ ಅವರು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಇದನ್ನೆಲ್ಲಾ ಸಂಪೂರ್ಣವಾಗಿ ಯೋಚನೆ ಮಾಡಿ ಇಂತಹ ಒಂದು ಒಳ್ಳೆಯ ತಿದ್ದುಪಡಿಯನ್ನು ಸರ್ಕಾರ ತಂದಿದೆ. ಶಾಶ್ವತ ಆಯೋಗ ಇಲ್ಲಿ ಇರಬೇಕು ಅಂತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ಏನು ತೆಗೆದುಕೊಂಡು ಬಂದಿದೆ, ಒಬ್ಬರು ನಿವೃತ್ತ ನ್ಯಾಯಾಧೀಶರೇ

ಇದಕ್ಕೆ ಅಧ್ಯಕ್ಷರಾಗಿರುತ್ತಾರೆ. ಇವರು 3 ವರ್ಷ ಇರುತ್ತಾರೆ. ಅದಕ್ಕೆ ರಾಜಕೀಯ ಒತ್ತಡಗಳಿಗೆ ಮಣಿದು, ಬೇರೆ ಬಡತನದಲ್ಲಿರತಕ್ಕ ಹಿಂದುಳಿದ ಸಮಾಜಕ್ಕೆ ಅನ್ಯಾಯ ಆಗಬಾರದು ಅನ್ನುವ ಒಂದು ಒಳ್ಳೆಯ ದೃಷ್ಟಿಯನ್ನು ಇಟ್ಟುಕೊಂಡೇ ಈ ಒಂದು ತಿದ್ದುಪಡಿಯನ್ನು ತಂದಿರುವುದು. ಅದಕ್ಕೆ ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಮನವಿ ಮಾಡಿಕೊಳ್ಳುತ್ತಿದ್ದೇನೆ, ಅವರು ದಯ ಮಾಡಿ ಇದಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಅಧ್ಯಕ್ಷರೆ, ಇದರಲ್ಲಿ ಟರ್ಮ್ ಆಫ್ ಆಫೀಸ್ ಏನು ಇದೆ,

> 4. Term of office and conditions of service of Chairman and Members.- (1) Subject to the pleasure of the State Govern ment the Chairman and every memeber shall hold office for the term of three years from the date he assumes office or until he attains the age of sixty seven years whiever is earlier.....

67 ವರ್ಷ ಎಂದು ಏಕೆ ಬರಬೇಕಾಗಿತ್ತು ಇದರಲ್ಲಿ? ಇದು ನನಗನ್ನಿಸುತ್ತದೆ, ಯಾರನ್ನೋ ಉದ್ದೇಶ ಇಟ್ಟುಕೊಂಡ, 67 ವಯಸ್ಸಿಗೆ ಇದು ಇರಬೇಕು ಅನ್ನುವ ಉದ್ದೇಶ ಕಾಣುತ್ತಾ ಇದೆ. ಈ ತರಹ ಆಗಬಾರದು. ನಮ್ಮದೇ ಆದಂತಹ ಕರ್ನಾಟಕ ಸ್ಟೇಟ್ ಮೈನಾಟೀಸ್ ಕಮೀಷನ್ ನಲ್ಲೂ Members shall hold office of term for three years from the date they assume the office..... ಆಮೇಲೆ ನ್ಯಾಷನಲ್ ಕಮೀಷನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಆದರಲ್ಲೂ ಕೂಡ every member shall hold term of office for three years from the date of the assuming the office.....

ಈ ತರಹ ಬೇರೆಯವರಲ್ಲಿ ಬರೀ ಮೂರು ವರ್ಷ ಎಂದು ಇದ್ದರೂ ಕೂಡ ನಮ್ಮ A Bill to constitute a Commission for Backward Classes, ಇದನ್ನು 67 years of age or whichever is earlier... ಅನ್ನುವ ಉದ್ದೇಶ ಕೆಟ್ಟದಾಗಿ ಕಾಣುತ್ತದೆ; ಬೇರೆಯವರಿಗೆ ಕೇಳಲಿಕ್ಕೂ ಕೂಡ. ಇದು ಯಾರದೋ ಉದ್ದೇಶ ಇಟ್ಟುಕೊಂಡು ಈ ತರಹ ಟರ್ಮ್ ಆಫ್ ಆಫೀಸ್ ಮಾಡಬಾರದು. ಯಾವುದನ್ನೇ ಮಾಡಿದರೂ 3 ವರ್ಷ ಟರ್ಮ್ ಎಂದು ಮಾಡಿ. ಅದನ್ನು ಬಿಟ್ಟು ಬಿಟ್ಟು, 67 ವರ್ಷ ಅಂತ ಇಟ್ಟರೆ, ನಾಳೆ ಯಾರೋ 70 ವರ್ಷದವನು ಇರುತ್ತಾರೆ. ಅವರು ಹೇಳುತ್ತಾರೆ, 70 ವರ್ಷದಿಂದ 73 ವರ್ಷದವರೆಗೆ ಇರಲಿ ಎಂದು ಹೇಳುತ್ತಾನೆ. ಆದ್ದರಿಂದ ಹಿಂದೆ ಯಾವುದು ಬಳಕೆಯಲ್ಲಿದೆ, ಅದೇ ಬಳಕೆಯಲ್ಲೇ 3 ವರ್ಷ ಎಂದು ಬದಲಾವಣೆ ಮಾಡಬೇಕು ಎಂದು ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಶಿವಪ್ಪ :- ಮಾನ್ಯ ಅರ್ಥ ಮಂತ್ರಿಗಳು ಹೇಳಿದರು. ಸರ್ವೋಚ್ಚ ಆದೇಶದ ಪ್ರಕಾರ ಈ ಒಂದು ಆಯೋಗವನ್ನು ರಚನೆ ಮಾಡುವುದಕ್ಕೆ ಈ ಬಿಲ್ಲನ್ನು ತಂದಿದ್ದೇವೆ ಎಂದು. ಈಗ ನಮ್ಮ ಸ್ನೇಹಿತರು ಹೇಳಿದ ಹಾಗೆ, three years term or 67 years which ever is earlier,-

ಆ ರೀತಿ ಸುಪ್ರೀಂ ಕೋರ್ಟಿನ ಆದೇಶದಲ್ಲಿ ಏನಾದರೂ ಇದೆಯಾ? Why this restriction or condition is going to be imposed.... ಅವರು ಹೇಳಿದ ಹಾಗೆ 3 ವರ್ಷ ಎಂದು ಹೇಳಿ ಅಥವಾ ಯಾರೋ ಒಬ್ಬರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು 67 ವರ್ಷ ಎಂದು ಹೇಳುತ್ತೀರಿ? 67 ವರ್ಷಕ್ಕೆ ಆಗಲೇ ಇನ್‌ಸ್ಯಾನಿಟಿ ಪ್ರಾರಂಭವಾಗಿರುತ್ತದೆ. ತಮಗೆಲ್ಲಾ ಗೊತ್ತಿದೆ. ಅದು ಅಷ್ಟು ಸರಿ ಹೋಗುವುದಿಲ್ಲ. 67ರ ತನಕ ಇರಬೇಕು ಅಂದರೆ "ಅರುಳು-ಮರುಳು" ಅಂತ ನಾವೇನು ಹೇಳುತ್ತೆವಲ್ಲಾ, ಅದು ಪ್ರಾರಂಭವಾದಾಗ ಸರಿಯಾದ ವರದಿ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ be specific, three years term or five years term,... ಈಗ ನಿಮ್ಮ ಗಮನದಲ್ಲಿ ಯಾರಾದರೂ ಇದ್ದರೆ, ಅವರಿಗೆ ಎಷ್ಟು ವರ್ಷದಲ್ಲಿ ರಿಟೈರ್‌ಮೆಂಟ್ ಆಗುತ್ತಾರೋ ಅಲ್ಲಿಯವರೆಗೆ ಎಂದು ನಿಗದಿ ಮಾಡಿ. ಈ ದ್ವಂದ್ವ whichever is earlier during the pleasure of the Government, this & that may be avoided for the betterment of the Backward classes.....

ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ :- ಸರ್ಕಾರದ ಪ್ರತಿಯೊಬ್ಬ ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು, ನಾನು ನಿರ್ದಿಷ್ಟವಾಗಿ ವಿವರಣೆಯನ್ನು ಕೇಳುತ್ತಿದ್ದೇನೆ. ಈಗ ಜನತಾದಳದ ಸರ್ಕಾರ ಇದೆ. ಇದರ ಟರ್ಮ್ ಮುಗಿಯುವ 6 ತಿಂಗಳೋ 3 ತಿಂಗಳೋ ಇರುವಾಗ, ಇದೇ ಸರ್ಕಾರ ಇರಬಹುದು. ಅಥವಾ ಬೇರೆ ಯಾವುದೇ ಸರ್ಕಾರ ಇರಬಹುದು; ಒಬ್ಬ ಅಧ್ಯಕ್ಷರನ್ನು ಆಯೋಗಕ್ಕೆ ನೇಮಕ ಮಾಡುತ್ತಾರೆ. 6 ತಿಂಗಳು, ಅಥವಾ 1 ವರ್ಷದ ನಂತರ ಇದ್ದಂತಹ ಸರ್ಕಾರ ಬದಲಾವಣೆಯಾಗುತ್ತದೆ. ಸರ್ಕಾರಕ್ಕೆ ಇಚ್ಛೆಗೊಳಪಟ್ಟು ಅಂದ ತಕ್ಷಣ, ಇನ್ನೊಂದು ಸರ್ಕಾರ ಆ ಅಧ್ಯಕ್ಷರನ್ನು ಇಷ್ಟಪಡುವುದಿಲ್ಲ. ಆಗ ಪರಿಸ್ಥಿತಿ ಏನಾಗುತ್ತದೆ? ಮೂರು ವರ್ಷ ನಿಗದಿ ಮಾಡುತ್ತಾ ಇದ್ದೀರಲ್ಲಾ?

SRI M. P. PRAKASH :- On the case of all political appointments, when there is change of Government, they resign.

ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ :- ಹಾಗಾದರೆ ಇದು ರಾಜಕೀಯ ಅಪಾಯಿಂಟ್‌ಮೆಂಟ್ ಎಂದು ಅರ್ಥ. ಇದು ರಾಜಕೀಯವಾದ ನೇಮಕಾತಿಯೆಂದು ಆಗುತ್ತದೆ ಅಲ್ಲಿಗೆ. 67 ವರ್ಷ ವಯಸ್ಸು ಏಕೆ ಮಾಡಬೇಕು? ಇದು ರಾಜಕೀಯ ಅಲ್ಲದಿದ್ದರೆ?

ಉಪಾಧ್ಯಕ್ಷರು :- ಅದು ಹೇಳುತ್ತಾರೆ ಆಮೇಲೆ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ :- ರಾಜಕೀಯ ನೀತಿ ಎಂದು ಸರ್ಕಾರ ಒಪ್ಪುವುದಾದರೆ ಹಾಗಾದರೆ 67 ವರ್ಷ ವಯಸ್ಸನ್ನು ಏಕೆ ನಿಗದಿ ಮಾಡಬೇಕು?

ಶ್ರೀ ರಮೇಶ್ ಸಿ. ಜಿಗಜಿಣಗಿ :- ಮಾನ್ಯ ಉಪಧ್ಯಕ್ಷರೇ, ಮಾನ್ಯ ಶ್ರೀನಿವಾಸ ಗೌಡರು, ಹಾಗೂ ಶಿವಪ್ಪನವರು ಇದು ಮೂರು ವರ್ಷ ಇರುವುದು ಒಳ್ಳೆಯದು, ಆದರೆ ವಯಸ್ಸಿನ ಏನು ಮಿತಿಯನ್ನು ಹಾಕಿದ್ದೀರಿ 67 ಅದು ಸರಿಯಲ್ಲವೆಂದು ಏನು ಹೇಳಿದ್ದಾರೆ. ಆದರೆ ಈಗ ಈ ಬಿಲ್ಲನ್ನು ಒಪ್ಪಿಕೊಳ್ಳಲಿ, ಆಮೇಲೆ ಇದರಲ್ಲಿ ಏನು ಸಣ್ಣಪುಟ್ಟ ನ್ಯೂನ್ಯತೆಗಳಿವೆ ಅದನ್ನು ಸರಿಪಡಿಸಲಿಕ್ಕೆ ನಾನು ಯೋಚನೆ ಮಾಡುತ್ತೇನೆ. 67 ವರ್ಷ ಬೇಡವೆಂದು ಏನು ಹೇಳುತ್ತಾರೆ, ಈಗ ಬಿಲ್ಲನ್ನು ಪಾಸ್ ಮಾಡಿಕೊಡಲಿ ಆಮೇಲೆ ಅದನ್ನು ಆರ್ಡಿನೆನ್ಸ್ ಮುಖಾಂತರ

ಅದರ ಬದಲಾವಣೆ ಮಾಡಿಕೊಡುತ್ತೇನೆಂದು ಹೇಳಿ ತಮ್ಮ ಮುಖಾಂತರ ನಾನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಶ್ರೀ ರಾಮರೆಡ್ಡಿಯವರು ಹೇಳಿದರು, ಯಾವಾಗ ಸರ್ಕಾರ ಬದಲಾವಣೆ ಯಾದಾಗ ಆ ಅಧ್ಯಕ್ಷರನ್ನು ಕಿತ್ತುಹಾಕುತ್ತೀರಿ, ಮೂರು ವರ್ಷ ಎಂದು ಬರೆಯುವ ಅವಶ್ಯಕತೆ ಏನೆಂದು ಹೇಳಿದರು. ಆದರೆ ಅವರು ಮೂರು ವರ್ಷದ ತನಕ ಇರುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಅವನು ಏನಾದರೂ ತಪ್ಪು ಮಾಡಿದರೆ ಈ ಬಿಲ್‌ನಲ್ಲಿದೆ, ಅವನ್ನು ಕೆಲವು ಕ್ರಿಮಿನಲ್ ಕೇಸು ಮತ್ತೊಂದರಲ್ಲಿ ಇನ್‌ವಾಲ್ವ್ ಆದಾಗ ಯಾವರೀತಿ ತೆಗೆಯಬೇಕೆಂದು ಆ ಬಿಲ್‌ನಲ್ಲಿದೆ. ನಾನು ಹೇಳಿದ್ದೇನೆ, ಕೆಲವರು ತಾವಾಗಿಯೇ ಇಚ್ಛಿಪಟ್ಟು ನಾನು ಒಲ್ಲೆಯೆಂದು ಹೇಳಿ ರಾಜೀನಾಮೆ ಕೊಟ್ಟು ಹೋಗುವವರಿಗೆ ಬೇಡವೆಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ದಯವಿಟ್ಟು ಎಲ್ಲರೂ ಒಪ್ಪಿಕೊಳ್ಳಿ, ಸಣ್ಣಪ್ಪಟ್ಟ ಏನು ನ್ಯೂನ್ಯತೆಗಳಿವೆ ಇದರಲ್ಲಿ ಅದನ್ನು ನಾನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ತಮ್ಮ ಮುಖಾಂತರ ನಾನು ಹೇಳುತ್ತೇನೆ.

ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಈ ಬಿಲ್ಲನ್ನು ಒಪ್ಪಿಕೊಳ್ಳ ಬಾರದೆಂದು ಇಲ್ಲ. ನಾಳೆ ದಿವಸ ಏನಾಗುತ್ತದೆಂದರೆ, ಈಗ ಸಧ್ಯಕ್ಕೆ ಒಪ್ಪಿಕೊಳ್ಳಿ, ಮತ್ತೆ ಆರ್ಡಿನೆನ್ಸ್ ತಂದು ಅದನ್ನು ಬದಲಾವಣೆ ಮಾಡುತ್ತೇವೆಂದರೆ ನಾಳೆ ದಿವಸ ಆರ್ಡಿನೆನ್ಸ್ ತರಲಿಕ್ಕೆ ಆಗುವುದಿಲ್ಲ ಬಹಳ ಕಷ್ಟವಾಗುತ್ತದೆ. ಎರಡನೆಯದು ಅವರು ಇಷ್ಟಬಂದು ರಾಜೀ ನಾಮೆಯನ್ನು ಕೊಟ್ಟರೆ ಅದು ಸರಿ. ಕೊಟ್ಟು ಹೋಗಲಿ ಅದಕ್ಕೆ ಯಾರದೂ ಅಭ್ಯಂತರವಿಲ್ಲ. ಆದರೆ ತಾವಾಗಿಯೇ ಸರ್ಕಾರದ ಇಚ್ಛೆಗೆ ಒಳಪಟ್ಟು ಎಂದು ಹೇಳತಕ್ಕ ಪ್ರಶ್ನೆ ಬಂದಾಗ ಅದು ರಾಜಕೀಯ ನೇಮಕಾತಿಯಾಗುತ್ತದೆ. ಆಗ ಹಲವಾರು ಸಮಸ್ಯೆಗಳು ಬರುತ್ತವೆ. ಅದನ್ನು ದಯವಿಟ್ಟು ಪರಿಶೀಲನೆಗೆ ತೆಗೆದುಕೊಳ್ಳಬೇಕು. ಅದನ್ನು ಕಾನೂನುಬದ್ಧ ಮಾಡಬೇಕು. ರಾಜ ಕೀಯ ನೇಮಕಾತಿ ಆಗಬಾರದೆಂದು ಅಷ್ಟೆ.

ಶ್ರೀ ಹೆಚ್. ಶಿವಪ್ಪ :- ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಏನು ಹೇಳಿದರು ಅದರಿಂದ ಅವರು ಕನ್ವಿನ್ಸ್ ಆಗಿದ್ದಾರೆಂದು ಆಯಿತು. 67 ನೇ ವಯಸ್ಸಿನ ಬಗ್ಗೆ he has been convinced about our submissionಅಂದಾಗ ಆರ್ಡಿನೆನ್ಸ್ ತಂದು ಮಾಡು ತ್ತೇವೆ ಅಂದರೆ ಏನು ಅರ್ಥ? It goes on record. ಇಲ್ಲಿ ಕನ್ವಿನ್ಸ್ ಆದಾಗ ಇಲ್ಲಿಯೇ ತಿದ್ದುಪಡಿ ಮಾಡುವುದಕ್ಕೆ ಬದಲಾಗಿ ಮುಂದೆ ನಾವು ಆರ್ಡಿನೆನ್ಸ್ ತಂದು ನಾವು ಮಾಡುತ್ತೇವೆ ಅನ್ನುವುದು ಅಷ್ಟು ಸೂಕ್ತವಲ್ಲ. Moreover, his portfolio may be changed tomorrow in the reshuffle or something may happen.

ಶ್ರೀ ರಮೇಶ್ ಸಿ. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಇದ್ದೇ ಇರುತ್ತದೆ. ನನ್ನ ಖಾತೆ ಬದಲಾವಣೆಯಾದರೆ ಸರ್ಕಾರದ ಕಮಿಟ್‌ಮೆಂಟ್ ಬದಲಾಗುವುದಿಲ್ಲ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

SRI. H. SHIVAPPA :- Men may come and men may go; but the Government remains ಆದ್ದರಿಂದ ಅದು ಬೇಸಿಕ್ ಪ್ರಿನ್ಸಿಪಲ್. ನಾವು ಇರಬಹುದು, ನಾಳೆ ಇನ್ನೊಬ್ಬರು ಇರಬಹುದು. ಅದು ಸರ್ಕಾರ ಶಾಶ್ವತವಾದ ಸರ್ಕಾರ ಅದು ರಾಜ್ಯಾಂಗದ ಪ್ರಕಾರ ಅದು ಇದ್ದೇ ಇರುತ್ತದೆ.

The Minister who gives assurance on the floor of the House may not be there tomorrow for various reasons. So, the assurance given here may not be implemented. The assurance given here may not be translated into reality. Therefore, when you are convinced right now, what prevents you to effect the amendement to that effect? Therefore, I appeal through the Chairman that the Hon'ble Minister may effect the changes now itself.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾತನಾಡುತ್ತಾ ಹೇಳಿದರು. 67 ವರ್ಷ ತೆಗೆಯುವುದಕ್ಕೆ ಮತ್ತೆ ಆರ್ಡಿನೆನ್ಸ್ ಮಾಡಬೇಕಾದ ಅಗತ್ಯವಿಲ್ಲ. ಈಗಲೇ ಅದನ್ನು ತೆಗೆದೂ ಮಾಡುತ್ತೇವೆಂದರೆ ಸಾಕಾಗುತ್ತದೆ. ಇಲ್ಲಿ ಏನು ಕಾಣಿಸುತ್ತದೆ ಅಂದರೆ ಸರ್ಕಾರ ಏನಾದರೂ ಕಮಿಟ್‌ಮೆಂಟ್ ಆಗಿದೆಯೋ ಎನ್ನುವ ಅನುಮಾನಕ್ಕೆ ಅಸ್ಪದವಾಗುತ್ತದೆ. ದಯವಿಟ್ಟು ಸರ್ಕಾರ ಅದಕ್ಕೆ ಅಸ್ಪದ ಕೊಡಬೇಡಿ. ಏನು ಕಾನೂನು ರೀತಿ ಮೂರು ವರ್ಷ ಮಾಡಬೇಕು ಅದನ್ನು ದಯವಿಟ್ಟು ಮಾಡಿಯೆಂದು ತಮ್ಮ ಮೂಲಕ ನಾನು ಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ಬಸವರಾಜ್ :- ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಹಾವನೂರು ವರದಿಯಲ್ಲಿ ಹಿಂದುಳಿದ ವರ್ಗದವರನ್ನು ಗುರುತಿಸಿದ್ದಾರೆ. ವೆಂಕಟಸ್ವಾಮಿಯವರ ವರದಿ, ಚಿನ್ನಪ್ಪರೆಡ್ಡಿಯವರ ವರದಿ ಅಲ್ಲಿ ಗುರುತಿಸಿರತಕ್ಕ ಹಿಂದುಳಿದ ವರ್ಗದವರನ್ನು ಈಗ ನೇಮಕ ಮಾಡುವ ಆಯೋಗದವರು ಮರು ಪರಿಶೀಲನೆ ಮಾಡುವ ಅವಕಾಶ ಇದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಈ ಶಾಶ್ವತ ಆಯೋಗಕ್ಕೆ ನಾವು ಹಿಂದುಳಿದವರಾ ಅಥವಾ ಹಿಂದುಳಿದವರಲ್ಲವಾ ಅಥವಾ ಹಿಂದೆ ಆಗಿರತಕ್ಕ ಕಮೀಷನ್‌ಗಳಲ್ಲಿ ಏನು ಬಿಟ್ಟುಹೋಗಿವೆ ಅದಕ್ಕೆ ಯಾರು ಬೇಕಾದರೂ ಅರ್ಜಿ ಕೊಡಬಹುದು. ಅದು ಸತ್ಯ ಅಸತ್ಯವನ್ನು ಪರಿಷ್ಕರಣ ಮಾಡತಕ್ಕ ಪವರ್ ಆಯೋಗ ಮತ್ತು ಅಧ್ಯಕ್ಷರಿಗೆ ಇರುತ್ತದೆ. ನಿಜವಾಗಿಯೂ ಅವನು ಸಮಾಜದಲ್ಲಿ ಹಿಂದುಳಿದವನಾಗಿದ್ದರೆ ಅವರನ್ನು ಕನ್ಸಿಡರ್ ಮಾಡ ಬಹುದು. ಆದರೆ ಸರ್ಕಾರದವರು ನೀವು ಮಾಡಿದಿಯೆಂದು ಹೇಳುವುದಕ್ಕಾಗುವುದಿಲ್ಲ. He should convince ಇನ್ನೊಂದು ವಿಚಾರ 67 ವರ್ಷ ಏನಿದೆ ಅದಕ್ಕೆ ಈಗಲೇ ತಿದ್ದುಪಡಿ ಮಾಡಿಯೆಂದು ಕೇಳುತ್ತಾರೆ. ಮಾನ್ಯ ಶಿವಪ್ಪನವರು ಹೇಳುತ್ತಾರೆ, ನಾಳೆ ನಿಮ್ಮ ಅಧಿಕಾರ ಅಥವಾ ಪೋರ್ಟ್‌ಪೊಲಿಯೋ ಬದಲಾದರೆ ಅದರ ಗತಿಯೇನು ಎಂದು ಕೇಳಿದ್ದಾರೆ.

SRI H. SHIVAPPA :- I am only expecting a contingency. He may be changed in the reshuffle. His portfolio may not remain as it is. I am only expecting the contingency to happen.

ಶ್ರೀ ರಮೇಶ್ ಸಿ. ಜಿಗಜಿಣಗಿ :- ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನು ಇಲ್ಲಿ ಉತ್ತರ ಹೇಳುವುದು ಸರ್ಕಾರದ ಪರವಾಗಿ. ನಾನು ಹೇಳುವುದು ವೈಯಕ್ತಿಕ ರಮೇಶ್ ಜಿಗಜಿಣಗಿಯ ಉತ್ತರವಲ್ಲ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಿ. ರಮೇಶ್ ಜಿಗಜಿಣಗಿಯವರು

ಇರುತ್ತಾರೋ ಬಿಡುತ್ತಾರೋ ಪೋರ್ಟ್‌ಫೋಲಿಯೋ ಇರುತ್ತದೋ ಬಿಡುತ್ತದೋ ಆ ಮಾತಲ್ಲ. ಇದು ಸರ್ಕಾರದ ಕಮಿಟ್‌ಮೆಂಟ್. ದಯವಿಟ್ಟು ನಾನು ಪುನಃ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಅಲ್ಲಿ ಏನು ಸಣ್ಣಪುಟ್ಟ ನ್ಯೂನ್ಯತೆಗಳು ಇದ್ದರೂ ಕೂಡ ತಾವು ಈಗ 67 ವರ್ಷದ ಬಗ್ಗೆ ಹೇಳಿದ್ದೀರಿ. ಪುನಃ ಒಂದು ಆರ್ಡಿನೆನ್ಸ್ ತಂದು ಅದನ್ನು ಸರಿಪಡಿಸೋಣವೆಂದು ನಾನು ಒಪ್ಪಿಕೊಂಡಿದ್ದೇನೆ. ಬಹುಶಃ ಎಲ್ಲಾ ಸದಸ್ಯರೂ ಕೂಡ ಕನ್‌ವಿನ್ಸ್ ಆಗಿದ್ದಾರೆಂದು ನಾನು ಭಾವಿಸಿಕೊಳ್ಳುತ್ತೇನೆ. ದಯವಿಟ್ಟು ಈ ಬಿಲ್ಲನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ :– ಮಾನ್ಯ ಉಪಾಧ್ಯಕ್ಷರೇ, ಆರ್ಡಿನೆನ್ಸ್ ತರತಕ್ಕ ಬಗ್ಗೆ ಏಕೆ ಹೋಗಬೇಕು? ಈಗ ತಿದ್ದುಪಡಿ ಮಾಡಿ 67 ವಯಸ್ಸು ಬೇಡವೆಂದು ಹೇಳುವುದಕ್ಕೆ ಆರ್ಡಿನೆನ್ಸ್‌ಗೆ ಹೋಗುವುದರ ಬದಲು ಈಗ ತೊಂದರೆ ಏನೆಂದು ಹೇಳಿ? 67 ವಯಸ್ಸನ್ನು ಬದಲಾಯಿಸುವುದಕ್ಕೆ ಏನಾದರೂ ತೊಂದರೆ ಇದೆಯೆ? ಸರ್ಕಾರದ ಇಚ್ಛೆಗೆ ಒಳಪಟ್ಟಿರತಕ್ಕದ್ದನ್ನು ಬದಲಾಯಿಸುವುದಕ್ಕೆ ಏನಾದರೂ ತೊಂದರೆ ಇದೆಯಾ? ನಿಮ್ಮ ತೊಂದರೆ ಏನಿದೆ ಎಂದು ಅದನ್ನಾದರೂ ಹೇಳಿ ನಮಗೆ. ಕಾನೂನು ತೊಡಕು ಇದೆಯಾ ಆಥವಾ ನಿಮಗೆ ಬೇರೆ ಏನಾದರೂ ತೊಂದರೆ ಇದೆಯಾ? ಮತ್ತೆ ಅದಕ್ಕೆ ಆರ್ಡಿನೆನ್ಸ್‌ಗೆ ಏಕೆ ಹೋಗಬೇಕು?

ಶ್ರೀ ರಮೇಶ ಸಿ. ಜಿಗಜಿಣಗಿ :– ಈಗ ಒಪ್ಪಿಕೊಳ್ಳಿ, ಪುನಃ ಒಂದು ಆಜ್ಞೆಯನ್ನು ಹೊರಡಿಸಿ ಅದನ್ನು ಬದಲಾವಣೆ ಮಾಡೋಣ.

ಒಬ್ಬ ಮಾನ್ಯ ಸದಸ್ಯರು :– ಈಗ ವಿಧೇಯಕವನ್ನು ಸಭೆಯ ಮತಕ್ಕೆ ಹಾಕಬೇಕು, ತಿದ್ದುಪಡಿಯನ್ನು ತದನಂತರ ತರಲಿಕ್ಕೆ ಬರುತ್ತದೆ.

ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ :– ಬದಲಾವಣೆ ಮಾಡುವುದರಿಂದ ಏನಾದರೂ ತೊಡಕು ಇದೆಯಾ? ಸರ್ಕಾರಕ್ಕೆ ಅಂತಹ ತೊಂದರೆ ಏನಾದರೂ ಇದ್ದರೆ ಅದನ್ನು ಹೇಳಲಿ ನೋಡೋಣ.

ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ 1995 ಪರ್ಯಾಲೋಚನಾ ಪ್ರಸ್ತಾಪ

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ:

"1995 ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ರಿಂದ 18 ರವರೆಗೆ

ಉಪಾಧ್ಯಕ್ಷರು :– "ಖಂಡ 2 ರಿಂದ 18 ರವರೆಗೆ,ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."